**ಸಾಕ್ಷಿಗೆ ದಿನಾಂಕ 17-11-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ.ಸಿ.ಬಿ.ಎ. ವಕೀಲರಿಂದಃ**

ನನಗೆ ದಿಃ 07-04-2022 ರಂದು ಆರೋಗ್ಯ ಸರಿಯಾಗಿ ಇರಲಿಲ್ಲ ಎಂಬುದನ್ನು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸಂಧರ್ಭದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಸಹಜ ಸ್ಥಿತಿಗೆ ಬಂದಿದ್ದು, ನ್ಯಾಯಾಲಯವು ಸಾಕಷ್ಟು ಕಾಲಾವಕಾಶವನ್ನು ನಮಗೆ ನೀಡಿತ್ತು ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ನೀಡಲು ನಾನು ಒಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ನೀಡಲು ಒಂದು ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.